**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 143/2019**

**ಸಿಡಬೂಃ10 ಪಿ ಡಬ್ಲ್ಯೂಃ9**

**ಹೆಸರುಃ** **ಕಲ್ಲನಗೌಡ**

**ತಂದೆ ಹೆಸರುಃ ವೀರನಗೌಡ ಸಿದ್ದನಗೌಡರ**

**ವಯಸ್ಸುಃ** **66 ವರ್ಷಗಳು.**

**ಉದ್ಯೋಗಃ** **ನಿವೃತ್ತ ಪಿ ಎಸ್ ಐ**

**ವಾಸ ಸ್ಥಳಃ** **ಹಾರೋಬೆಳವಡಿ ಗ್ರಾಮ ಜಿಃಧಾರವಾಡ.**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ 23.12.2025**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ನಾನು ಎ ಎಸ್ ಐ ಆಗಿ 2015 ರಿಂದ 2019 ರ ವರೆಗೆ ಗುಡಗೇರಿ ಪೊಲೀಸ ಠಾಣೆಯಲ್ಲಿ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ನಾನು ದಿಃ18.05.2018 ರಂದು ಸಂಜೆ 7.45 ಗಂಟೆಗೆ ಎಸ್ ಎಚ್ ಓ ಕರ್ತವ್ಯದಲ್ಲಿ ಇದ್ದಾಗ ಚಾಸಾಃ1 ರವರು ಠಾಣೆಗೆ ಬಂದು ಒಂದು ಗಣಕೀಕೃತ ಪಿರ್ಯಾದನ್ನು ನೀಡಿದ್ದು, ಅದನ್ನು ನಾನು ಸ್ವೀಕರಿಸಿಕೊಂಡು ನಮ್ಮ ಠಾಣಾ ಗುನ್ನಾ ಸಂಃ48/2018 ರಂತೆ ಕಲಂ 143, 147, 148, 323, 324, 341, 504, 506 ಸಹ ವಾಚ ಕಲಂ 149 ಐಪಿಸಿರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ಎಫ್ ಐ ಆರ್ ನ್ನು ನ್ಯಾಯಾಲಯಕ್ಕೆ ಎಚ್ ಸಿ ನಂಃ475 ರವರ ಮೂಲಕ ಕಳುಹಿಸಿಕೊಟ್ಟಿರುತ್ತೇನೆ. ನಂತರ ಮೇಲಾಧಿಕಾರಿಗಳಿಗೆ ವಿಷಯವನ್ನು ತಿಳಿಸಿರುತ್ತೇನೆ.

3. ಅದೇ ದಿನ ಚಾಸಾಃ4 ರಿಂದ 8 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ದಿಃ19.05.2018 ರಂದು ಒಂದು ಕಾಡು ಜಾತಿಯ ಕಟ್ಟಿಗೆಯನ್ನು ಚಾಸಾಃ1 ರವರು ಹಾಜರುಪಡಿಸಿದ್ದು, ಆ ಸಮಯದಲ್ಲಿ ಪಂಚರಾದ ಚಾಸಾಃ2 ಮತ್ತು 3 ರವರು ಹಾಜರು ಇದ್ದು, ಚಾಸಾಃ1 ರವರು ತೋರಿಸಿದ ಗುನ್ನಾ ಜಾಗೆಯ ಪಂಚನಾಮೆಯನ್ನು ಬೆಳಗ್ಗೆ 9.15 ರಿಂದ 10.15 ವರೆಗೆ ಮಾಡಿ, ಪಂಚನಾಮೆಗೆ ಚಾಸಾಃ2 ಮತ್ತು 3 ರವರ ಸಹಿಗಳನ್ನು ಪಡೆದು, ಸದರಿ ಕಾಡುಜಾತಿಯ ಕಟ್ಟಿಗೆಯನ್ನು ಜಪ್ತುಪಂಚನಾಮೆ ಮೂಲಕ ಅದನ್ನು ಜಪ್ತುಪಡಿಸಿಕೊಂಡು ನ್ಯಾಯಾಲಯಕ್ಕೆ ಪಿಎಫ್ ಭರಿಸಿಕೊಂಡಿರುತ್ತೇನೆ. ಅದೇ ದಿನ ನಾನು ಚಾಸಾಃ1 ರವರ ಪುನಃ ಹೇಳಿಕೆಯನ್ನು ಪಡೆದಿರುತ್ತೇನೆ.

4. ದಿಃ18.08.2018 ರಂದು ಗಾಯಾಳುಗಳಾದ ಚಾಸಾಃ1 ಮತ್ತು 4 ರವರ ಗಾಯದ ಪ್ರಮಾಣ ಪತ್ರಗಳನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿತರು ಗುನ್ನಾ ಕಾಲದಿಂದ ತಲೆಮರಿಸಿಕೊಂಡಿರುವುದು ಖಚಿತಪಡಿಸಿಕೊಂಡಿರುತ್ತೇನೆ. ದಿಃ19.05.2018 ರಂದು ಪಿಡಿಓ ಕಳಸ ಗ್ರಾಮ ಪಂಚಾಯತ ಇವರಿಂದ ಗುನ್ನೆ ಸ್ಥಳದ ಎರಡು ಮನೆ ಉತಾರಗಳನ್ನು ಹಾಗೂ ಜಮೀನು ಉತಾರಗಳನ್ನು ತರಿಸಿಕೊಂಡು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

5. ದಿಃ28.06.2018 ರಂದು 1 ರಿಂದ 13 ನೇ ಆರೋಪಿತರು ಗೌರವಾನ್ವಿತ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಧಾರವಾಡ ಇವರಿಂದ ನಿರೀಕ್ಷಣಾ ಜಾಮೀನನ್ನು ಪಡೆದುಕೊಂಡು ಬಂದು ಠಾಣೆಯಲ್ಲಿ ಹಾಜರಾಗಿರುತ್ತಾರೆ. ಸದರಿಯವರ ವಿರುದ್ಧ ದಸ್ತಗೀರಿ ನಿಯಮಗಳನ್ನು ಪಾಲಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇವೆ. ಮೇಲನೋಟಕ್ಕೆ ಆರೋಪಿತರು ಅಪರಾಧ ಎಸಗಿರುವುದು ಕಂಡುಬಂದಿದ್ದರಿಂದ ತನಿಖೆ ಪೂರ್ಣಗೊಳಿಸಿ ದಿಃ04.10.2018 ರಂದು ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

6. ನಿಪಿಃ1 ರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ1 ಬಿ ಎಂದು, ನಿಪಿಃ2 ರ ಮೇಲೆ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ2 ಸಿ, ಸಾಕ್ಷಿ ಎಫ್ ಐ ಆರ್ ನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ7 ಎಂದು, ಸಾಕ್ಷಿಯ ಸಹಿಯನ್ನು ನಿಪಿಃ7 ಎ ಎಂದು, ನಿಪಿಃ5 ಮತ್ತು 6 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಕ್ಕೆ ನಿಪಿಃ5 ಬಿ ಹಾಗೂ 6 ಬಿ ಎಂದು, ಸಾಕ್ಷಿಯು ನಾಲ್ಕು ಉತಾಗಳನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿಃ8 ರಿಂದ 11 ಎಂದು, ಹಾತ್ ನಕಾಶೆಯನ್ನು ನಿಪಿಃ12 ಎಂದು, ಸಾಕ್ಷಿಯ ಸಹಿಗಳನ್ನು ನಿಪಿಃ8, 9 ಹಾಗೂ 12 ರಲ್ಲಿರುವ ಸಹಿಗಳನ್ನು ನಿಪಿಃ8 ಎ, 9 ಎ ಹಾಗೂ 12 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮುಮಾ ನಂಃ1 ನ್ನು ಹಾಗೂ ಆರೋಪಿ 1 ಮತ್ತು 3 ರವರನ್ನು ನೋಡಿ ಸಾಕ್ಷಿ ನೋಡಿ ಗುರುಸಿದ್ದು, ಈ ದಿನ 2, 4 ರಿಂದ 11 ಮತ್ತು 13 ರವರು ನ್ಯಾಯಾಲಯದ ಮುಂದೆ ಗೈರು ಹಾಜರಾಗಿದ್ದು, ಆ ಬಗ್ಗೆ ಆರೋಪಿತರ ಪರ ವಕೀಲರು ಆರೋಪಿತರ ಗುರುತಿನ ತಕರಾರು ಇರುವುದಿಲ್ಲ ಅಂತ ವಿನಾಯತಿ ಅರ್ಜಿ ಸಲ್ಲಿಸಿದ್ದು. ಸಾಕ್ಷಿ ಆರೋತರನ್ನು ನೋಡಿದರೆ ಗುರುತಿಸುತ್ತೇನೆ ಎಂದುನುಡಿಯುತ್ತಾರೆ.

**ಪಾಟೀ ಸವಾಲುಃ ಶ್ರೀ ಜೆ ಬಿ ಎಸ್ ವಕೀಲರಿಂದ ಆರೋಪಿತರ ಪರ ವಕೀಲರುಃ**

1. ಈ ಪ್ರಕರಣದ ಪಿರ್ಯಾದಿ ಚಾಸಾಃ1 ರವರು ಪಿರ್ಯಾದಿನಲ್ಲಿ ತಮ್ಮ ಮತ್ತು ಆರೋಪಿತರ ನಡುವೆ ದಿವಾಣಿ ವ್ಯಾಜ್ಯ ಇರುವ ಬಗ್ಗೆ ದೂರಿನಲ್ಲಿ ಕಾಣಿಸಿರುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಪ್ರಕಾರ ಚಾಸಾಃ1 ರವರಿಂದ ಲಿಖಿತ ದೂರನ್ನು ಪಡೆದುಕೊಂಡು ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿಯಲ್ಲಿ ಸಂಬಂದಪಟ್ಟ ಪಿಡಿಓರವರಿಂದ ಗುನ್ನಾ ಜಾಗಕ್ಕೆ ಸಂಬಂದಪಟ್ಟ ಉತಾರ ಹಾಗೂ ಹಾತ್ ನಕಾಶೆಯನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವೈದ್ಯರಿಂದ ಗಾಯಾಳುಗಳಿಗೆ ಸಂಬಂದಪಟ್ಟ ಗಾಯದ ಪ್ರಮಾಣಪತ್ರವನ್ನು ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತರ ವಿರುದ್ಧ ಸರಿಯಾಗಿ ತನಿಖೆ ಮಾಡದೆ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಅವರ ವಿರುದ್ಧ ಸಲ್ಲಿಸಿ, ಆ ಪ್ರಕಾರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಸಾಕ್ಷಿಯ ಸಂಪೂರ್ಣ ಪಾಟೀ ಸವಾಲು ಮಾಡಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**

**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ  ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 143/2019**

**ಸಿಡಬ್ಲೂಃ8 ಪಿ ಡಬ್ಲ್ಯೂಃ10**

**ಹೆಸರುಃ** **ಬಾಬಾಜಾನ**

**ತಂದೆ ಹೆಸರುಃ ಹಸನಸಾಬ ಖತಾಲಸಾಬನವರ**

**ವಯಸ್ಸುಃ** **70 ವರ್ಷಗಳು.**

**ಉದ್ಯೋಗಃ** **ವ್ಯವಸಾಯ**

**ವಾಸ ಸ್ಥಳಃ** **ಕಳಸ.**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 23.12.2025**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ಚಾಸಾಃ1 ರಿಂದ 3, 7 ರವರ ಪರಿಚಯ ಇದೆ. ಚಾಸಾಃ4 ರಿಂದ 6 ರವರ ಪರಿಚಯ ಇಲ್ಲ. ನ್ಯಾಯಾಲಯದ ಮುಂದೆ ಹಾಜರು ಇರುವ ಆರೋಪಿ 1 ಮತ್ತು 3 ರವರ ಪರಿಚಯ ಇದೆ. ಈ ದಿನ 2, 4 ರಿಂದ 11 ಮತ್ತು 13 ರವರು ನ್ಯಾಯಾಲಯದ ಮುಂದೆ ಗೈರು ಹಾಜರಾಗಿದ್ದು, ಆ ಬಗ್ಗೆ ಆರೋಪಿತರ ಪರ ವಕೀಲರು ಆರೋಪಿತರ ಗುರುತಿನ ತಕರಾರು ಇರುವುದಿಲ್ಲ ಅಂತ ವಿನಾಯತಿ ಅರ್ಜಿ ಸಲ್ಲಿಸಿದ್ದು. ಸದರಿ ಆರೋಪಿತರ ಪೈಕಿ ಆರೋಪಿ 2, 4 ರಿಂದ 7 ರವರ ಪರಿಚಯ ಇದೆ. ಆರೋಪಿ 8 ರಿಂದ 11 ಮತ್ತು 13 ರವರ ಪರಿಚಯ ಇರುವುದಿಲ್ಲ. ದೂರುದಾರರು ಮತ್ತು ಆರೋಪಿತರ ನಡುವೆ ಆದ ಜಗಳದ ವಿಚಾರ ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಆರೋಪಿತರು ಚಾಸಾಃ1 ಮತ್ತು 4 ರವರೊಂದಿಗೆ ಜಗಳ ಮಾಡಿ ಕೈಯಿಂದ ಮತ್ತು ಕಟ್ಟಿಗೆಯಿಂದ ಹೊಡೆ ಬಡೆ ಮಾಡಿ, ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ಬೈದು ಜೀವದ ಧಮ್ಕಿ ಹಾಕಿರುತ್ತಾರೆ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ**

1. ದಿಃ18.05.2018 ರಂದು ಸಂಜೆ 6ಃ00 ಗಂಟೆಗೆ ನಾನು, ಮತ್ತು ನನ್ನಂತೆ ಚಾಸಾಃ6 ಮತ್ತು 7 ರವರು ಓಣಿಯಲ್ಲಿ ಮಾತಾನಾಡುತ್ತಾ ನಿಂತುಕೊಂಡಾಗ 1 ನೇ ಆರೋಪಿ ಮತ್ತು 2 ರಿಂದ 3 ನೇ ಆರೋಪಿತರು ಎಲ್ಲರೂ ಗುಂಪುಕಟ್ಟಿಕೊಂಡು ಬಂದು ಚಾಸಾಃ1 ರವರ ಮನೆಯ ಮುಂದೆ ಬಂದು ಅವರಿಗೆ ಈ ಜಾಗ ನಮದು ಇನ್ನು ಮುಂದೆ

ಈ ಜಾಗದಲ್ಲಿ ಮನೆ ಕಟ್ಟಿಸಲಿಕ್ಕಿ ಹತ್ತಿದರೆ ಸುಮ್ಮನೆ ಬಿಡುವುದಿಲ್ಲ ಅಂತ ಹೇಳಿ ಅವಾಚ್ಯ ಶಬ್ದಗಳಿಂದ ಬೈದಾಡಲು ಪ್ರಾರಂಭಿಸಿದರು ಎಂದರೆ ಸರಿಯಲ್ಲ. ಚಾಸಾಃ1 ರವರು ಹೊರಗೆ ಬಂದು ನಮ್ಮ ಮನೆಯ ಮುಂದೆ ನಿಂತು ಅವರಿಗೆ ಈಗ್ಯಾಕೆ ಈ ಎಲ್ಲಾ ಮಾತು ನಾಳೆ ಹಿರಿಯರನ್ನು ಕೂಡಿಸಿ ಮಾತಾಡೋಣಾ ಅಂದರು ಎಂದರೆ ಸರಿಯಲ್ಲ. ಅಷ್ಟಕ್ಕೆ ಸಿಟ್ಟಾಗಿ 1 ನೇ ಆರೋಪಿ ಚಾಸಾಃ1 ರವರಿಗೆ ಸುತ್ತವರೆದು ಅಡ್ಡಗಟ್ಟಿ ತನ್ನ ಕೈಯಲ್ಲಿ ಇದ್ದ ಒಂದು ಬಡಿಗೆಯಿಂದ ಅವರ ತಲೆಗೆ ಹೊಡೆದರು ಎಂದರೆ ಸರಿಯಲ್ಲ. ಆಗ ಅವರು ರಕ್ತವಾಗಿ ಚೀರಾಡಲು ಪ್ರಾರಂಭಿಸಿದರು ಎಂದರೆ ಸರಿಯಲ್ಲ. 2 ರಿಂದ 13 ನೇ ಆರೋಪಿತರು ಎಲ್ಲಾ ಸೇರಿಕೊಂಡು ಚಾಸಾಃ1 ರವರಿಗೆ ಸಿಕ್ಕ ಸಿಕ್ಕಲ್ಲಿ ಹೊಡೆದು ಕಾಲನಿಂದ ಒದಿಯುತ್ತಿರುವಾಗ ಬಿಡಿಸಲು ಬಂದು ಚಾಸಾಃ4 ಮತ್ತು 5 ರವರನ್ನು ಸಹ ಕೈಯಿಗಳಿಂದ ಹೊಡೆ ಬಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ ಅಲ್ಲೆ ಇದ್ದ ನಾವು ನಾನು, ಚಾಸಾಃ6 ಮತ್ತು 7 ರವರು ಸೇರಿ ಜಗಳವನ್ನು ಬಿಡಿಸಿದೇವು ಎಂದರೆ ಸರಿಯಲ್ಲ. ಆರೋಪಿತರು ಚಾಸಾಃ1, 4 ಮತ್ತು 5 ರವರಿಗೆ ಜೀವದ ಧಮ್ಮಕಿ ಹಾಕಿ ಅಲ್ಲಿಂದ ಹೋದರು ಎಂದರೆ ಸರಿಯಲ್ಲ. ಈ ಘಟನೆ ಕುರಿತು ಚಾಸಾಃ1 ರವರು ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ. ನನಗೆ ಜಗಳದ ವಿಷಯ ಗೊತ್ತಿದ್ದರು ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಓದಿ ಹೇಳಿದ ಹೇಳಿಕೆಯ ಭಾಗವನ್ನು ನಿಪಿಃ13 ಎಂದು ಗುರುತಿಸಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**